ದಿನಾಂಕ 03.10 .2024 ರಿಂದ 12.10.2024 ರ ವರೆಗೆ 10 ನೇ ವಾರ್ಷಿಕ ಶರನ್ನವರಾತ್ರಿ ಮಹೋತ್ಸವದ ಸಂಭ್ರಮದಲ್ಲಿ ಶ್ರೀ ಜಗದಂಬಾ ಮಂದಿರ .

ಸಂಚಾಲಕರು -ಯಕ್ಷ ಕಲಾ ಸಂಸ್ಥೆ(ರಿ).

ಡೊಂಬಿವಲಿ ಪಶ್ಚಿಮದ ಗೋಪಿನಾಥ್ ಚೌಕ್ ಎಂಬಲ್ಲಿ ಒಂದು ದಶಕಗಳ ಹಿಂದೆ ಯಕ್ಷಕಲಾ ಸಂಸ್ಥೆಯ ನೇತೃತ್ವದಲ್ಲಿ ನಿಕಟವರ್ತಿಗಳ ಸಂಪರ್ಕ ವಿಶೇಷತೆಯಿಂದ ತುಳುವ ಕನ್ನಡಿಗರಿಂದ ಸ್ಥಾಪಿಸಲ್ಪಟ್ಟಿರುವ ಶ್ರೀ ಜಗದಂಬಾ ಮಂದಿರಕ್ಕೆ ಇದೀಗ ಹತ್ತನೆಯ ವಾರ್ಷಿಕಾ ಶರನ್ನವರಾತ್ರಿ ಮಹೋತ್ಸವದ ಸಂಭ್ರಮ.ಮೇಲ್ನೋಟಕ್ಕೆ ಈ ಪರಿಸರದಲ್ಲಿ ಯಾವುದೇ ಮಂದಿರ ದೇವಸ್ಥಾನಗಳು ಇರಲಿಲ್ಲ .ಆದರೂ ಸ್ಥಾವರ ಜಂಗಮಗಳಲ್ಲಿ ದೈವದ ಸಾನಿಧ್ಯವಿರುತ್ತದೆ ಎಂಬುದು ಸತ್ಯ ಎಂಬಂತೆ ಇಲ್ಲಿಯ ಪುಣ್ಯ ಭೂಮಿಯಲ್ಲಿ ಶ್ರೀದೇವಿಯು ಭಕ್ತಾಭಿಷ್ಟ ಫಲಪ್ರದಾಯಿನಿಯಾಗಿ ನೆಲೆಸಿದ್ದಾಳೆ ಎಂದು ಬಜಪೆ ಸಮೀಪದ ಕೇಶವ ಪುದುವಾಲರ ಅಷ್ಟಮಂಗಲದ ಪ್ರಶ್ನ ಚಿಂತನೆಯಲ್ಲಿ ತಿಳಿದುಬಂದ ನಂತರವೇ ಈ ಪುಣ್ಯ ನೆಲದಲ್ಲಿ ಶ್ರೀ ಜಗದಂಬಾ ಮಂದಿರವನ್ನು ಸ್ಥಾಪಿಸಲಾಯಿತು. ಶ್ರೀದೇವಿ ಸಾನಿಧ್ಯವಿರುವ ಗರ್ಭಗುಡಿಯ ಒಳಗೆ ಅಷ್ಟ ಭುಜ ಶ್ರೀ ಜಗದಾಂಬಿಕೆಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ ಬಳಿಕ ಇಲ್ಲಿ ಪ್ರತಿ ವರ್ಷವೂ ಪ್ರತಿಯೊಂದು ಹಬ್ಬಹರಿದಿನಗಳನ್ನು ಆಚರಿಸುತ್ತಿರುವರಲ್ಲದೇ ಇಲ್ಲಿ ವರ್ಷವೂ ವಾರ್ಷಿಕ ಶ್ರೀ ಶನೇಶ್ವರ ಮಹಾಪೂಜೆ ಶ್ರೀ ಸತ್ಯನಾರಾಯಣ ಮಹಾಪೂಜೆ ರಂಗ ಪೂಜೆ ಅಲ್ಲದೆ ಯಕ್ಷಗಾನ ಹಾಗೂ ನವರಾತ್ರಿಯ ಒಂಬತ್ತು ದಿನವೂ ವಿಜೃಂಭಣೆಯಿಂದ ವಿವಿಧ ರೀತಿಯ ಸಾಂಸ್ಕೃತಿಕ ಧಾರ್ಮಿಕ ಉತ್ಸವಗಳೊಂದಿಗೆ ನವರಾತ್ರಿ ಉತ್ಸವದಲ್ಲಿ ಎರಡು ಹೊತ್ತು ಅನ್ನಸಂತರ್ಪಣೆ , ನಮ್ಮೂರ ಹಬ್ಬದ ಜಾತ್ರೆಯನ್ನು ನೆನಪಿಸುವಂತೆ ಇಲ್ಲಿ ನೆರೆಯುವ ಭಕ್ತ ಜನ ಸಾಗರ ಎಲ್ಲಿಯೂ ತೊಡಕಾಗದಂತೆ ಪೂಜಾ ಸಮಿತಿಯ ಪ್ರತಿಯೊಬ್ಬ ಕಾರ್ಯಕರ್ತರ ಲವಲವಿಕೆಯ ದುಡಿಮೆ ,ಎಲ್ಲರ ಗಮನ ಸೆಳೆಯುವ ದೇವರ ಮೂರ್ತಿ ಸಿಂಗಾರ, ಶ್ರೀ ಕ್ಷೇತ್ರದ ಪ್ರಧಾನ ಅರ್ಚಕರಾದ ಪರಮ ಪೂಜ್ಯ ರವಿ ತಂತ್ರಿಯವರಿಂದ ಜರಗುವ ವಿಧಿಭದ್ದವಾದ ಪೂಜಾ ವಿಧಾನಗಳು ,ನೇತ್ರಾನಂದ ಕರವಾಗಿ ಜರುಗಿಸಲ್ಪಡುವ ಮೆರವಣಿಗೆ ,ಅಖಂಡ ಭಜನೆ, ಇವೆ ಮೊದಲಾದ ಸಾಂಸ್ಕೃತಿಕ ಧಾರ್ಮಿಕ ಕಾರ್ಯಕ್ರಮಗಳ ಸಂಭ್ರಮದಲ್ಲಿ ಪೂಜಾ ಸಮಿತಿಯ ಶಿಸ್ತು ನಿಯಮಾವಳಿಗಳಿಂದ ಸ್ವಚ್ಚತೆಗೆ ಆದ್ಯತೆ ಇರುವುದರಿಂದ ಭಕ್ತರು ದೇವಸ್ಥಾನಕ್ಕೆ ಕಾಲಿಡುತ್ತಲೇ ಶಾಂತಿ ಸಮಾಧಾನಗಳು ಪ್ರಾಪ್ತಿಯಾಗುತ್ತದೆ ಎಂಬ ಭರವಸೆ. ಹಾಗೂ ಭಕ್ತರ ಪೀಡೆ ನಿವಾರಣೆಗೊಂಡು ಮನದ ಇಷ್ಟಾರ್ಥಗಳು ಕೈಗೂಡುವುದು ಎಂಬ ನಂಬಿಕೆಯು ಇರುವುದರಿಂದ ಇಲ್ಲಿ ಅಪಾರ ಭಕ್ತರ ಜನಸಂದಣಿ ನೆರೆಯುತ್ತದೆ .

ದೇವಸ್ಥಾನದ ಆಡಳಿತ ಮಂಡಳಿಯು ದೇವಸ್ಥಾನದಲ್ಲಿ ಯಕ್ಷಗಾನ ,ನಾಟಕ ,ಭಜನೆ ,ತಬಲ ,ಹಾರ್ಮೋನಿಯಂ, ಭರತನಾಟ್ಯ, ಇವೆ ಮೊದಲಾದ ಕಲಾರಂಗದ ತರಬೇತಿ ಶಿಬಿರಕ್ಕೆ ವಿಶೇಷ ಆದ್ಯತೆಯನ್ನು ನೀಡಿರುವರಲ್ಲದೆ ತವರೂರಿನ ಆಮಂತ್ರಿತ ಪ್ರಸಿದ್ಧ ಯಕ್ಷಗಾನ ಮೇಳಗಳ ಯಕ್ಷಗಾನ ಪ್ರದರ್ಶನಕ್ಕೆ ಪ್ರೋತ್ಸಾಹವನ್ನು ನೀಡುತ್ತಿರುವರು.

ಶ್ರೀ ಕ್ಷೇತ್ರದಲ್ಲಿ ನಿತ್ಯೋತ್ಸವ ಜರುಗಬೇಕೆಂದು ದೈವಜ್ಞರಿಂದ ತಿಳಿದು ಬಂದಿರುವಂತೆ ಊರ ಪರವೂರ ಭಕ್ತಾಭಿಮಾನಿಗಳು ಹಾಗೂ ಸೇವಾಕರ್ತರಿಂದ ಜರಗುತ್ತಿರುವ ನಿತ್ಯೋತ್ಸವಗಳಿಂದ ನಾಸ್ತಿಕರನ್ನು ಆಸ್ತಿಕರನ್ನಾಗಿಸಿ ಭಕ್ತರಿಷ್ಟಾರ್ಥಗಳನ್ನು ಈಡೇರಿಸುತ್ತಿರುವ ಶ್ರೀ ಜಗದಂಬಾ ಮಂದಿರದಲ್ಲಿ ವೈದ್ಯಕೀಯವಾಗಿ ಶೈಕ್ಷಣಿಕವಾಗಿ ಬಡವರಿಗೆ ಆರ್ಥಿಕ ನೆರವು ಹೀಗೆ ಹತ್ತು ಹಲವು ಯೋಜನೆಗಳಿಂದ ಸಂಸ್ಕಾರಯುತ ಸಮಾಜೋದ್ದಾರಕ್ಕೆ ಶ್ರಮಿಸುತ್ತಿರುವ ಶ್ರೀ ಜಗದಂಬಾ ಮಂದಿರವಿಂದು ನಗರದದ್ಯಾಂತ ಧಾರ್ಮಿಕತೆಯ ಕೇಂದ್ರಬಿಂದುವಾಗಿ ಭಕ್ತಾಕರ್ಷಣೀಯವಾಗಿ ಕಂಗೊಳಿಸುತ್ತಿದೆ.

ಶ್ರೀಕ್ಷೇತ್ರದ ಯುವ ವಿಭಾಗವು ಪ್ರತೀ ವರ್ಷ ವಿಶೇಷವಾಗಿ ಬದ್ಲಾಪುರು ಇಲ್ಲಿಯ ಅನಾಥಾಶ್ರಮಕ್ಕೆ ಭೇಟಿ ನೀಡಿ ಅಲ್ಲಿನ ನಿವಾಸಿ ಗಳಿಗೆ ಹಾಗೂ ಅಲ್ಲಿಯ ಆದಿವಾಸಿ ಶಾಲೆಯ ಮಕ್ಕಳಿಗೆ ಬೇಕಾದ ಎಲ್ಲಾ ಸೌಕರ್ಯಗಳನ್ನು ಒದಗಿಸುತ್ತಿರುವುದು ಅಭಿನಂದನೀಯ .ಕಳೆದ ವರ್ಷಾಂತ್ಯದ ಒಳಗೆ ಶ್ರೀಕ್ಷೇತ್ರದಲ್ಲಿ ಶ್ರೀಜಗದಂಬಾ ಮಂದಿರದ ಪರಿವಾರ ದೇವರುಗಳಾದ ಶ್ರೀನಾಗದೇವರು, ಶ್ರೀ ಮಹಾಲಿಂಗೇಶ್ವರ

ಮಹಾಗಣಪತಿ ದೇವರು, ತೀರ್ಥಭಾವಿ ,ನವಗ್ರಹದ ಅಷ್ಟ ಬಂದ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದಲ್ಲಿ ಶ್ರೀ ಕ್ಷೇತ್ರವು ಉತ್ತರೊತ್ತರ ಅಭಿವೃದ್ಧಿ ಹೊಂದಿ ಭಕ್ತರ ಕಷ್ಟಗಳು ದೂರವಾಗಿ ಇಷ್ಟಾರ್ಥಗಳು ಲಭಿಸುವುದೆಂದು ವಿದ್ವಾನ್ ಶ್ರೀ ಕೃಷ್ಣ ಭಟ್ ಬಪ್ಪನಾಡು ಅವರ ಪ್ರಶ್ನ ಚಿಂತನೆಯಲ್ಲಿ ತಿಳಿದು ಬಂದಿದ್ದು ಅದರಂತೆ ಎಲ್ಲಾ ಶುಭ ಕಾರ್ಯಗಳು ಸುಸಂಗವಾಗಿ ನೆರವೇರಿದ್ದು ಆ ಬಳಿಕ ಶ್ರೀ ಕ್ಷೇತ್ರದಲ್ಲಿ ಕಾರ್ತಿಕ ಮಾಸದಲ್ಲಿ ಒಂದು ತಿಂಗಳ ಪರ್ಯಂತರವೂ ದೀಪೋತ್ಸವದ ಸೇವಾ ಸಂಕಲ್ಪ ಯೋಜನೆಯನ್ನು ಆಯೋಜಿಸಿದ್ದು ಭಕ್ತಾಭಿಮಾನಿಗಳೆಲ್ಲರೂ ಈ ಪುಣ್ಯ ಕಾರ್ಯದಲ್ಲಿ ಸೇವಾ ಕರ್ತರಾಗಿ ಸಹಕರಿಸಿ ಈ ಯೋಜನೆಯನ್ನು ಯಶಸ್ವಿಗೊಳಿಸಬೇಕೆಂದು ವಿನಂತಿಸಲಾಗಿದೆ. ಭಕ್ತರಿಷ್ಟಾರ್ಥವನ್ನು ಈಡೇರಿಸುತ್ತಿರುವ ಶ್ರೀ ಜಗದಂಬಾ ಮಂದಿರದಲ್ಲಿ ಹತ್ತನೇ ವಾರ್ಷಿಕ ಶರನ್ನವರಾತ್ರಿ ಮಹೋತ್ಸವವು ಇದೇ ಬರುವ ಅಕ್ಟೋಬರ್ ತಿಂಗಳ ದಿನಾಂಕ 3 ರಿಂದ 12 ರವರೆಗೆ ವಿವಿಧ ಸಾಂಸ್ಕೃತಿಕ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ವಿಜ್ರಂಭಣೆಯಿಂದ ಜರುಗಲಿದ್ದು ಶ್ರೀಜಗದಂಬೆಯ ಸಾನಿಧ್ಯದಲ್ಲಿ ಚಂಡಿಕಾ ಹೋಮ ಹಾಗೂ ದುರ್ಗಾ ನಮಸ್ಕಾರ ಪೂಜೆ ಮತ್ತು ರಂಗ ಪೂಜೆಯ ಸಹಿತ ಶರನ್ನವರಾತ್ರಿ ಮಹೋತ್ಸವವು

ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ನೆರವೇರಲಿರುವುದು. 10 ನೇ ವಾರ್ಷಿಕ ಶರನ್ನರಾತ್ರಿ ಮಹೋತ್ಸವಕ್ಕೆ ಸರ್ವ ಭಕ್ತಾಬಿಮಾನಿಗಳ ಸಹಕಾರವನ್ನು ಬಯಸುವ ಶ್ರೀ ಜಗದಂಬಾ ಮಂದಿರದ ಭಕ್ತ ಮಂಡಳಿ ಹಾಗೂ ಅಧ್ಯಕ್ಷರು,ಗೌರವಾಧ್ಯಕ್ಷರು ,ಕಾರ್ಯದರ್ಶಿ,ಅಲ್ಲದೆ ಸರ್ವ ಪದಾಧಿಕಾರಿಗಳಿಗೆ ಸದಸ್ಯ ಸದಸ್ಯೆಯರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿರುವ ಸರ್ವರಿಗೂ ಶ್ರೀ ಕ್ಷೇತ್ರದ ಅಷ್ಟ ಭುಜ ಜಗದಂಬೆ ಹಾಗೂ ಪರಿವಾರ ದೇವರುಗಳ ಪೂರ್ಣಾ ಅನುಗ್ರಹವಿರಲೆಂದು ಪ್ರಾರ್ಥಿಸುತ್ತಾ ಹತ್ತನೇ ವಾರ್ಷಿಕೋತ್ಸವದ ಯಶಸ್ವಿಗೆ ಶುಭ ಹಾರೈಸುವ.

ರಾಜೇಶ್. ಸಿ . ಕೋಟ್ಯಾನ್.

2027 ರಲ್ಲಿ ನಮ್ಮೀ ದೇವಸ್ಥಾನದ ಬ್ರಹ್ಮಕಲಶೋತ್ಸವವು ಜರುಗಲಿದ್ದು ಈ ಸುಸಂದರ್ಭದಲ್ಲಿ ದೇವಸ್ಥಾನವನ್ನು ಶಿಲಾಮಯ ಗೊಳಿಸಲು ತನು ಮನ ಧನಗಳಿಂದ ಸಹಕರಿಸಿ ಕ್ಷೇತ್ರದ ಅಭಿವೃದ್ಧಿಯಲ್ಲಿ ತಾವೆಲ್ಲರೂ ಪಾಲ್ಗೊಳ್ಳಬೇಕೆಂಬುದಾಗಿ ಶ್ರೀ ಕ್ಷೇತ್ರದ ಸರ್ವ ಭಕ್ತಾಬಿಮಾನಿಗಳಲ್ಲಿ ವಿನಂತಿ.